# ಪದಗಂಧ ಮಾಲಿಂಗ

ಕಂದನ ಕೆಂದುಟಿಗೆ ಕರುಣೆಯಲಿ ಕರುಣಿಸೊ
ಕರಗದ ಕಿರುನಗೆಯ ಮಾಲಿಂಗ
ಮರೆಯೆ ನಿನ್ನುಪಕಾರ

ತೊಟ್ಟಿಲನು ತೂಗಿಸಿದೆ ಪದಕೊಟ್ಟು ಎದೆಗೆ
ಜೋಗುಳವ ಹಾಡಿಸಿದೆ ಮಾಲಿಂಗ
ಜೋಪಾನ ಕಾಯೊ ಕಂದನ್ನ

ಗಿಡ ನೆಡುವ ಕೈ ನೀಡೊ ನೀರೆರೆವ ಮನವ
ಫಲ ನೈವೇದ್ಯ ನಿನಗೆ ಮಾಲಿಂಗ
ಬದುಕಿಗೆ ಇಂಬಾಗಿ ಮರಗಾಡು

ನಿದ್ದೆಗಷ್ಟೇ ಮಲಗಿಸು ದುಡಿಮೆ ಎತ್ತರ ತೋರು
ಎಚ್ಚರಿಸು ಆತ್ಮವನು ಮಾಲಿಂಗ
ಜಗದ ಹಾದಿಯ ನಡೆಯೆ

ಕಂಡುದರ ಆಚೆಗಿರುವುದನರಿವರಿವ ನೀಡು
ನಿನ್ನಿರವ ತೋರಿ ಮಾಲಿಂಗ
ಇರಿಸು ಹಮ್ಮಿಗೆ ದೂರ ದೂರ

● **ಸ. ರಘುನಾಥ**

ಕಲೆ: ವಾಗೀಶ ಹೆಗಡೆ

